ನಗರ ಡಿವಿಜ್ ಡಿಸ್ಟ್ರಿಕ್ಟ್ ಜಡ್ಜ್ರವರ ಕೋರ್ಟ್ನಲ್ಲಿ.

1890ನೇ ಇಸವಿ ಅರ್ಜಿ ನಂಬರ್ 66.

ಮೃತಪಟ್ಟ ಚಂದ್ರಶೇಖರಜೋಯಿಸನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಸುಬ್ರಾಯ ಮೈನರ್‌ಗಾರ್ಡಿಯ್ ಜನಕತಂದೆ ಕುರುವಳ್ಳಿ ಹಿರಿಯಂಣಪ್ಪ ಮೃತಪಟ್ಟ ಸದರೀ ಚಂದ್ರಶೇಖರ ಜೋಯಿಸನಿಗೆ ಮೈನರ್ ಸುಬ್ರಯ ಮಗ ಆಗಬೇಕೆಂಬ ಹಕ್ಕುದಾರ ಮೇಲೆ ಕೊಪ್ಪ ತಾಲ್ಲೂಕು ತ್ರಿಂಗೇರಿ ಸ್ಥಳದ ಮೇಲ್ಕಂಡ ಮೈನರ್‌ಗಾರ್ಡಿಯ್ ಕುರವಳ್ಳಿ ಹಿರಿಯಂಣಪ್ಪನು ಸದರೀ ತ್ರಿಂಗೇರಿ ವಾಸಸ್ಥರಾಗಿ ಮೃತಪಟ್ಟಚಂದ್ರಶೇಖರಜೋಯಿಸನ ಜಿಂದಗಿ ಬಗ್ಯಾಗಿ ಬರತಕ್ಕ 3,000 ರೂಪಾಯಿ ಸಾಲಗಳನ್ನು ವಸೂಲ್ ಮಾಡುವದಕ್ಕೆ ಮೈನರ್‌ಗೋಸ್ಕರ 1860ನೇ ಇಸವಿ 27ನೆ ಆಕ್ಟ್ಯ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತಾನೆ.

ಸದರೀ ದರಖಾಸ್ತುದಾರನಾದ ಐಜ್ ಮೈನರ್ ಗಾರ್ಡಿಯ್ ಹಿರಿಯಂಣಪ್ಪನ ಅರ್ಜಿಯನ್ನು 1890ನೇ ಇಸವಿ ಅಗಸ್ಟು ತಿಂಗಳು ತಾರೀಖು 20ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಚಂದ್ರಶೇಖರ ಜೋಯಿಸನ ಆಸ್ತಿಗೆ ಹಕ್ಕುದಾರರಾದ ವಿಸಿಪ್ಟ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿಇಧೆ.

1890ನೇ ಇಸವಿ ಜುಲೈ ತಿಂಗಳು 14ನೇ ತಾರೀಖಿನಲ್ಲಿ ಕೋರ್ಟು ಮೊಹರ್ ಮತ್ತು ನನ್ನ ದಸ್ತಖತೊಡನೆ ಕೊಡೋಣಾಗಿಧೆ.

ಸಿ. ಕ್ರೈಸ್,
ಡಿಸ್ಟ್ರಿಕ್ಟು ಜಡ್ಜ್.

ಪ್ರಸಿದ್ಧಪತ್ರಿಕೆ

I. ಕಡೂರ್ ತಾಲ್ಲೂಕು ರಿಜಸ್ಟರ್ 1089ನೇ ನಂಬರು ಯಳ್ಳಂಬಳಿಕೆ ಅಣಕಟ್ಟು ನಾಲೆ ಮತ್ತು ತಲಾವು ಕಾಂಮಗಾರಿ ಉದ್ದಿಶ್ಯ 1890ನೇ ಇಸವಿ ಜುಲೈ ಮಾಹೆ 31ನೇ ತಾರೀಖು ವೇವಿಗೂ ದರಖಾಸ್ತುಗಳು ಕಡೂರ್ ಡಿವಿಜ್ ಎಗ್ಜಿಕ್ಯೂಟಿವ್ ಇಂಜಿನಿಯರ್ ಸಾಹೆಬರವರಿಂದ ತೆಗದುಕೊಳ್ಳಲ್ಪಡುತ್ತವೆ. ಈ ಕೆಳಗೆ ಕಂಡ ಅಂದಾಜಿನಲ್ಲಿನ ಐಟಂಗಳ ವೊತ್ತವನ್ನ ಕಾಣಿಸ್ಪಟ್ಟಿರುತದೆ. ಇದು ನಿಷ್ಕರ್ಷೆಯಾದದ್ದಾಗಿರುವದಿಲ್ಲ. ಕಾಂಗಾರಿಯು 1892ನೇ ಇಸವಿ ಮಾರ್ಚಿ ತಿಂಗಳು ಆಖೈರೊಳಗಾಗಿ ಪೂರೈಸತಕ್ಕದ್ದು.

II. ಪ್ಲಾನ್ ಮತ್ತು ಅಂದಾಜು ಪತ್ರು ವಗೈರೆ ಎಗ್ಜಿಕ್ಯೂಟಿವ್ ಇಂಜನಿಯರ್ ಸಾಹೆಬರವರ ಆಫಿಸಿನಲ್ಲಿ ಪ್ರಾತಃಕಾಲ 11 ಘಂಟೆ ಲಾಗಾಯಿತು ಸಾಯಿಂಕಾಲ 4 ಘಂಟೆವರಿವಿಗೆ ನೋಡಲು ಅವಕಾಶ ಕೊಡಲ್ಪಡುತ್ತೆ.

III. ದರಖಾಸುಗಳೂ ಅಚ್ಚು ಹಾಕಿದ ಫಾರಂನಲ್ಲಿ ಬರಿಯಬೇಕು. ಈ ಫಾರಂಗಳು ಎಗ್ಜಿಕ್ಯೂಟಿವ್ ಇಂಜಿನಿಯರ್ ಸಾಹೆಬರವರ ಆಫಿಸಿನಲ್ಲಿ ದೊರಿಯುತ್ತವೆ. ಈ ಕೆಳಗೆ ಕಾಣಿಸಲ್ಪಟ್ಟಿರುವ ಸ್ಟೇಟ್‌ಮೆಂಟ್ ಪ್ರಕಾರ ಬಂದು ಸ್ಟೇಟ್‌ಮೆಂಟ್ ಲಗತ್ತು ಮಾಡಿರಬೇಕು. ಅದರಲ್ಲಿ ಕಂಟ್ರಾಕ್ಟುದಾರನು ಯಾವರೇಟ್ ಪ್ರಕಾರ ಪ್ರತಿ ಐಟಂಗಳ ಕೆಲಸವನ್ನು ಮಾಡಿಸಬಲ್ಲನೋ ಆ ರೇಟನ್ನು ಅಥವಾ ಆ ದರವನ್ನು ನಮೂದುಮಾಡಬೇಕು.

ಫಾರಂ

ಕೆಲಸದ ವಿವರ	ಕೆ	ಮೊ	ಕಂಟ್ರಾಕ್ಟುದಾರ ಕೆಲಸಮಾಡುವದಕ್ಕೆ ಕಪ್ಪುವ ದರ.
ಮಂಣುಕೆಲಸ ಕಲ್ಲುಕೆಲಸ	ಸಲೆಗಜ 1ಕ್ಕೆ	16000 (ಯಿ ತಪಸೀಲ್)	ಯಿದರ ಹಿಂದಗಡೆ ನಮೂದಿಸಿಯಿರುತ್ತೆ.

IV. ಪ್ರತಿ ಬಂದು ದರಖಾಸ್ತಿನ ಸಂಗಡಲು 100 ರೂಪಾಯಿಗಳ ಕರ್ರೆನ್ಸಿ ನೋಟುಗಳಾಗಲಿ, ಗವರ್ಮೆಂಟ್ ಪ್ರಾಂಸರಿ ಆಗಲಿ ಅಥವಾ ನಗದಾಗಲಿ ಡಿಪಾಜಿಟ್ ಹಣವನ್ನು ತೇವಣಾತಿಯಾಗಿ ಹಾಜರ್ಮಾಡಬೇಕು, ಮತ್ತು ಲಕೋಟೆ ಮೇಲೆ ಕಡೂರು ತಾಲ್ಲೂಕು ರೆಜಿಸ್ಟರ್ ನಂಬರು 1089ನೇ ನಂಬರು ಯಳ್ಳಂಬಳಿಕೆ ಅಣಕಟ್ಟು ನಾಲೆ ಮತ್ತು ತಲಾವ್ ಕಾಂಗಾರಿ ಬಗ್ಯೆ ದರಖಾಸ್ತೆಂಬದಾಗಿ ಬರಿಯಬೇಕು, ತಪ್ಪಿದಲ್ಲಿ ಅಂಥಾ ದರಖಾಸ್ತುಗಳನ್ನ ತಿರಸ್ಕರಿಸಲಾಬೀತು.

V. ಯಾವ ದರಖಾಸ್ತನ್ನಾಗಲಿ ಮಂಜೂರ್ಮಾಡತಕ್ಕದ್ದಕ್ಕೆ ಬೀಳ್ ಇಂಜಿನಿಯರ್ ಸಾಹೇಬರವರು ಸ್ವತಂತ್ರರಾಗಿರುತ್ತಾರೆ, ಹಾಗೆ ಮಂಜೂರ್ಮಾಡತಕ್ಕದರಲ್ಲಿ ಕೀಳ್ಪಟ್ಟ ದರಖಾಸ್ತೆನ್ನೇಆಗಲಿ ಅಥವಾ ಯಾವುದೇ ಆಗಲಿ ಒಪ್ಪಿಕೊಳ್ಳಬೇಕೆಂಬ ನಿರ್ಬಂಧವಿರುವದಿಲ್ಲ ಮತ್ತು ತಿರಸ್ಕರಿಸಿದ ದರಖಾಸ್ತುಗಳಿಗೆ ಕಾರಣಗಳನ್ನು ಕೊಡುವದಿಲ್ಲ.

VI. ಯಾವ ದರಖಾಸ್ತನೇ ಆಗಲಿ ಮಂಜೂರ್ಮಾಡಿದ 8 ಯಂಟು ದಿನಗಳ ವಳಗಾಗಿ ಮಂಜೂರ್ಮಾಡಲ್ಪಟ್ಟ ದರಖಾಸ್ತುದಾರನು ಕಂಟ್ರಾಕ್ಟು ಬಾಂಡ್ ಎಂಬ ಕರಾರು ಪತ್ರವನ್ನ ಬರಯಿಕೊಡಬೇಕು. ತಪ್ಪಿದಲ್ಲಿ ಅವನ ದರಖಾಸ್ತು ರದ್ದು ಮಾಡಲ್ಪಟ್ಟು ತೇವಣಾತಿ ಹಣವನ್ನು ಸರ್ಕಾರಕ್ಕೆ ಶೇರಿಸಿಕೊಳ್ಳಲ್ಪಡುತ್ತೆ.